ಇ. ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

ರಾಜೀವ್‌ಗಾಂಧಿ ವಸತಿ ಮಹಾಮಂಡಲ

175(791) ಶ್ರೀ ನರಸಿಂಹ ಸ್ವಾಮಿ ಜೆ:(ದೊಡ್ಡಬಳ್ಳಾಪುರ) ಮಾನ್ಯ ವಸತಿ, ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂದಿ ವಸತಿ ಮಹಾಮಂಡಲದಿಂದ 2009–10ನೇ ಸಾಲಿಗೆ ನೀಡಿರುವ ಮನೆಗಳು ಎಷ್ಟು;

ಅ) ಅದರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿಗೆ ನೀಡಿರುವ ಮನೆಗಳೆಷ್ಟು; ಹಾಗೂ ಭೌತಿಕ ಗುರಿ ಎಷ್ಟು;

ಇ) ಫಲಾನುಭವಿಗಳಿಗೆ ಸರ್ಕಾರ ನೀಡುತ್ತಿರುವ ಹಣವೆಷ್ಟು; ಹಾಗೂ ಈ ಮೊತ್ತದಲ್ಲಿ ಮನೆ ನಿರ್ಮಿಸಲು ಸಾಧ್ಯವಿದೆಯೇ?

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು(ವಸತಿ, ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು.)

ಅ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ 2009–10ನೇ ಸಾಲಿಗೆ ಈ ಕೆಳಕಂಡ ಯೋಜನೆಗಳಡಿ ಒಟ್ಟು 89489 ಮನೆಗಳ ಗುರಿಯನ್ನು ನಿಗದಿಪಡಿಸಲಾಗಿದೆ.

ಕ್ರ.ಸಂ	ಯೋಜನೆ	ಗುರಿ
1	ಗ್ರಾಮೀಣ ಅಂಬೇಡ್ಕರ್	10000
2	ಇಂದಿರಾ ಆವಾಸ್ ಯೋಜನೆ	79489
3	ಗ್ರಾಮೀಣ ಆಶ್ರಯ	0
ಒಟ್ಟು		**89489**

ಆ) ಮೇಲೆ ತಿಳಿಸಿದ ಯೋಜನೆಗಳಡಿ ದೊಡ್ಡಬಳ್ಳಾಪುರ ತಾಲ್ಲೂಕಿಗೆ ನೀಡಿರುವ ಮನೆಗಳ ಗುರಿ ಇಂತಿದೆ.

ಕ್ರ.ಸಂ	ಯೋಜನೆ	ಭೌತಿಕ ಗುರಿ
1	ಗ್ರಾಮೀಣ ಅಂಬೇಡ್ಕರ್	20
2	ಇಂದಿರಾ ಆವಾಸ್ ಯೋಜನೆ	838
3	ಗ್ರಾಮೀಣ ಆಶ್ರಯ	0
ಒಟ್ಟು		**888**

ಇ) ಪ್ರತಿ ಫಲಾನುಭವಿಗೆ ಮನೆಯನ್ನು ನಿರ್ಮಿಸಿಕೊಳ್ಳಲು ರೂ.40000/–ಗಳನ್ನು ಸಂಪೂರ್ಣವಾಗಿ ಸಹಾಯಧನ ರೂಪದಲ್ಲಿ ನೀಡಲಾಗುತ್ತಿದೆ. 2009–10 ನೇ ಸಾಲಿಗೆ ಗ್ರಾಮೀಣ ಆಶ್ರಯ ಯೋಜನೆಯಡಿ ಗುರಿಯನ್ನು ನೀಡಿರುವುದಿಲ್ಲ.

ಇತ್ತೀಚೆಗೆ ಕಟ್ಟಡ ಸಾಮಾಗ್ರಿಗಳ ಬೆಲೆ ದುಬಾರಿಯಾಗಿರುವ ಹಿನ್ನಲೆಯಲ್ಲಿ ಈ ಅನುದಾನದಲ್ಲಿ ಮನೆ ನಿರ್ಮಿಸಿಕೊಳ್ಳಲು ಅಸಾಧ್ಯವಾಗುತ್ತಿರುವುದರಿಂದ ಫಲಾನುಭವಿಗಳು ತಮ್ಮ ಸ್ವಂತ ವಂತಿಕೆಯನ್ನು ಸಹ ಹೂಡಿಕೊಂಡು ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಇದನ್ನು ಸರ್ಕಾರ ಮನಗಂಡು 2010–11ನೇ ಸಾಲಿನಿಂದ "ಬಸವ ಇಂದಿರಾ ವಸತಿ ಯೋಜನೆ" ಎಂಬ ನೂತನ ಯೋಜನೆಯನ್ನು ಜಾರಿಗೆ ತಂದಿದ್ದು ಈ ಯೋಜನೆಯಡಿ ಪ್ರತಿ ಮನೆಯ ಘಟಕದ ವೆಚ್ಚವನ್ನು ರೂ. 40,000 ರಿಂದ 63,500/– ಕ್ಕೆ ಹೆಚ್ಚಿಸಲಾಗಿದ್ದು ಇದರಲ್ಲಿ ಸರ್ಕಾರದಿಂದ ನೀಡಲಾಗುವ ಸಹಾಯಧವನ್ನು ರೂ.40,000/– ರಿಂದ 50,000/– ಕ್ಕೆ ಹೆಚ್ಚಿಸಲಾಗಿದ್ದು, ಇನ್ನುಳಿದಂತೆ ರೂ. 10,000/– ಬ್ಯಾಂಕಿನಿಂದ ಡಿ.ಆರ್ ಐ ನಡಿ ಸಾಲ ಮತ್ತು ರೂ. 3,500/– ಫಲಾನುಭವಿ ವಂತಿಕೆಯಾಗಿರುತ್ತದೆ.

ಅನಧಿಕೃತ ಕಾಂಪೌಂಡ್‌ನ್ನು ತೆರವುಗೊಳಿಸುವ ಬಗ್ಗೆ

177(332) ಶ್ರೀ ಸುರೇಶ್‌ಗೌಡ:(ನಾಗಮಂಗಲ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ ಬೆಂಗಳೂರು ನಗರ ಜಿಲ್ಲೆ, ಜ್ಞಾನಜ್ಯೋತಿನಗರ ಬಡಾವಣೆ, 1ನೇ ಕ್ರಾಸ್‌ನಲ್ಲಿ ರಸ್ತೆಗೆ ಅಡ್ಡಲಾಗಿ ಕಾಂಪೌಂಡ್ ನಿರ್ಮಿಸಿರುವುದನ್ನು ತೆರವುಗೊಳಿಸಲು ಈ ಹಿಂದ ಮಾನ್ಯ ಸದಸ್ಯರು ಕೇಳಲಾದ ಪ್ರಶ್ನೆಗಳಿಗೆ ಆದಷ್ಟು ಶೀಘ್ರ ಕಾಂಪೌಂಡ್